
# ಅಳ್ಳೀಮರ

**ಮಕ್ಕಳು ಕಟ್ಟುವ ಗೂಡಿಗೊಂದಿಷ್ಟು ರೆಂಬೆ ಕೊಂಬೆ ನೆರಳು**

**ಮೈಸೂರು ಜಿ॥ ನಂಜನಗೂಡು ತಾ॥ ಹೆಗ್ಗಡಹಳ್ಳಿ ಸರ್ಕಾರಿ ಪ್ರೌಢ ಶಾಲೆಯ ಮಕ್ಕಳ ಪತ್ರಿಕೆ** **ಸಂಚಿಕೆ –6, ಡಿಸೆಂಬರ್ 2013**

## ಹಿರಿಯ ಸಾಹಿತಿ ಹಾಗೂ 80ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾದ ಡಾ. ನಾ. ಡಿಸೋಜ ಅವರೊಡನೆ ನಮ್ಮ ಶಾಲೆಯ ಮಕ್ಕಳು ನಡೆಸಿದ ಸಂವಾದ

**ಆಶಾ ಎಚ್. ಎಚ್. :** *ನಮಸ್ಕಾರ ಸರ್, ಮಕ್ಕಳಿಗಾಗಿ ಸತತವಾಗಿ ಕತೆಗಳನ್ನು ಬರೀತಾ ಇದ್ದೀರಿ. ಮಕ್ಕಳ ಸಾಹಿತ್ಯ ಮತ್ತು ದೊಡ್ಡವರ ಸಾಹಿತ್ಯ ಅಂತ ಬೇರೆ ಬೇರೆ ಇದ್ಯಾ ಸರ್?*

**ನಾ.ಡಿ.:** ಇದೆಯಮ್ಮ ಇದೆ. ಈಗ ದೊಡ್ಡವರಿಗೆ ನಾವು ಏನನ್ನು ಹೇಳ್ತೀವೆ ಅದೆಲ್ಲವನ್ನು ಕೂಡ ನಾವು ಮಕ್ಕಳಿಗೆ ಹೇಳ್ಲಿಕ್ಕೆ ಆಗುವುದಿಲ್ಲ. ಏಕೆಂದರೆ, ನಿಮ್ಮ ವಯಸ್ಸಿಗೆ ವಿಷಯಗಳ ಬಗ್ಗೆ ಇರುವಂತ ಆಸಕ್ತಿ, ಕತೂಹಲ, ತಿಳ್ಕೋಬೇಕೂ ಅನ್ನುವ ಉತ್ಸಾಹ ಇದು ಬೇರೆ ರೀತಿ ಇರುತ್ತೆ. ದೊಡ್ಡವರ ರೀತಿ ಬೇರೆ ಮಕ್ಕಳ ರೀತಿ ಬೇರೆ ಇರುತ್ತೆ ಅಲ್ವಾ. ಈಗ ನಕ್ಷತ್ರ ನೋಡಿದ್ರೆ ನಮಗೆ ಸಂತೋಷ ಆಗುವುದಿಲ್ಲ. ನಕ್ಷತ್ರವನ್ನ ಪ್ರಾರಂಭದಿಂದ ನೋಡ್ತಾ ಬಂದಿದೀವಿ. ಆದರೆ ಒಂದು ಮಗು ನಕ್ಷತ್ರ ನೋಡಿದಾಗ ಆ ಮಗುವಿಗೆ ಬಹಳ ಸಂತೋಷ ಆಗುತ್ತೆ. ಯಾಕೆಂದ್ರೆ ಅದಕ್ಕೆ ನಕ್ಷತ್ರ ಹೊಸದಾಗಿರುತ್ತೆ ಅಂತಹದ್ಯಾವುದನ್ನೂ ಅದು ನೋಡಿರುವುದಿಲ್ಲ. ಅದರ ಬಗ್ಗೆ ಒಂಥರ ಕುತೂಹಲ ಇರುತ್ತೆ. ಅದರ ಮಿಣುಕಾಟ ಕಂಡಾಗ ಮಗುವಿಗೆ ಬಹಳ ಆನಂದ ಆಗುತ್ತೆ. ಈ ಕಾರಣಕ್ಕೋಸ್ಕರ ಮಕ್ಕಳಿಗೋಸ್ಕರ ಬರೆಯುವುದೇ ಬೇರೆ ಹಿರಿಯರಿಗೋಸ್ಕರ ಬರೆಯುವುದೇ ಬೇರೆ. ವಿಚಿತ್ರ ಏನೂಂದ್ರೆ ಮಕ್ಕಳಿಗೋಸ್ಕರ ನಾವು ಏನನ್ನ ಬರಿತೇವೆ ಅದನ್ನ ಹಿರಿಯರೆಲ್ಲ ಓದುತ್ತಾರೆ; ಆದರೆ ಹಿರಿಯರೆಲ್ಲ ಬರವಣಿಗೆ ಬರದಿದ್ದನ್ನ ಮಕ್ಕಳಿಗೆ ಓದ್ಲಿಕ್ಕೆ ಆಗುವುದಿಲ್ಲ, ಅರ್ಥವಾಗುವುದಿಲ್ಲ. ಹೀಗಾಗಿ ಮಕ್ಕಳ ಸಾಹಿತ್ಯವೇ ಬೇರೆ. ಇರಬೇಕು; ಇದೆ ಅದು.

**ರೋಹಿತ್ ಕುಮಾರ್ ಎಚ್. ಎಂ:** *ತೀರಾ ಚಿಕ್ಕವರಿಗಾಗಿ ಮತ್ತು ದೊಡ್ಡವರಿಗಾಗಿ ಕತೆಗಳು ಪದ್ಯಗಳು ಇದೆ ಸರ್. ಆದರೆ ನಮ್ಮಂತ ಹೈಸ್ಕೂಲು ವಯಸ್ಸಿನವರಿಗಾಗಿ ಕತೆ, ಪದ್ಯಗಳು ಇದ್ಯಾ, ಬರೀತಾ ಇದ್ದಾರಾ ಸರ್?*

**ನಾ.ಡಿ.:** ಇದ್ಯೆಪ್ಪ ಇದೆ ಇದೆ. ನಮ್ಮ ಜಿ.ಪಿ. ರಾಜರತ್ನಂ ಅವರು, ಹೊಯ್ಸಳ ಅಂತೊಬ್ಬ ಕವಿ, ಪುಟ್ಟಪ್ಪ ಅಂತ ದೊಡ್ಡ ಕವಿಗಳು ಬಹಳ ಜನ ಸಣ್ಣ ಮಕ್ಕಳಿಗೂ ಬರ್ದಿದ್ದಾರೆ. ಶಿಶುಪ್ರಾಸ ಅಂತ ಸಣ್ಣ ಸಣ್ಣ ಮಕ್ಕಳಿಗೆ ಬರೀತಾರೆ. ಹಾಗೇನೆ, ಸ್ವಲ್ಪ ವಯಸ್ಸಾದವರಿಗೆ ಅಂತ ಬೇರೆ ಸಾಹಿತ್ಯನೂ ಇದೆ ನಮ್ಮಲ್ಲಿ. ಅದನ್ನ ನೀವು ಓದ್ಬಹುದು. ಪುಸ್ತಕಗಳಲ್ಲಿ ಬೇರೆ ಬೇರೆ ವಯಸ್ಸಿನವರಿಗೆ ಅಂತ ಇರುತ್ತೆ ಈ ತರದವನ್ನು ನೀವು ಓದ್ಬಹುದು.

**ಮಧುರ ಎಚ್. ಆರ್. :** *ನೀವು ಮಕ್ಕಳಿಗಾಗಿಯೇ ಹೆಚ್ಚು ಕತೆಯನ್ನು ಬರೆಯಲು ಸ್ಫೂರ್ತಿ ಏನು ಸರ್?*

**ನಾ.ಡಿ.:** ಮಕ್ಕಳೇ ನನಗೆ ಸ್ಫೂರ್ತಿ. ಮಕ್ಕಳ ಜೊತೆಗೆ ಒಡನಾಡೋದು, ಮಕ್ಕಳ ಮಾತುಗಳನ್ನು ಕೇಳೋದು. ಮತ್ತೆ ಮಕ್ಕಳು ಏನು ಮಾಡ್ತಾರೆ, ಏನು ಮಾತಾಡ್ತಾರೆ ಅನ್ನೋದನ್ನ ಗಮನಿಸೋದು. ಕೊನೆಗೆ ಮಕ್ಕಳಿಗೆ ಏನನ್ನ ಹೇಗೆ ಹೇಳಬಹುದು ಅನ್ನೋದನ್ನ ಯೋಚನೆ ಮಾಡೋದು. ಈಗ ನಾವು ದೊಡ್ಡವರಿಗೆ ಹೇಳಿದ ಹಾಗೆ ಮಕ್ಕಳಿಗೆ ಹೇಳುವುದಕ್ಕೆ ಆಗುವುದಿಲ್ಲ. ಇದೆಲ್ಲ ನಾನು ಶಾಲೆಗಳಿಗೆ ಹೋದಾಗ, ಬಹಳ ಜನ ಮಕ್ಕಳೊಂದಿಗೆ ಬೆರೆತಾಗ ನನಗೆ ಮಕ್ಕಳ ಸ್ವಭಾವ ಗುಣ ಗೊತ್ತಾಗುತ್ತೆ. ಅದಕ್ಕೆ ತಕ್ಕ ಹಾಗೆ ನಾನು ಬರೆಯುವಂತ ಯತ್ನವನ್ನು ಮಾಡ್ತೇನೆ.

**ಮಣಿಕಂಠ ಎಚ್.ಕೆ. :** *ಮಕ್ಕಳ ಜೊತೆಗೆ ನಿಮಗೆ ಪರಿಸರವೂ ಮುಖ್ಯ ಏಕೆ ಸರ್?*

**ನಾ.ಡಿ.:** ಮಕ್ಕಳ ಜೊತೆಯಲ್ಲಿ ಪರಿಸರ ಯಾಕೆ ಮುಖ್ಯ ಅಂತಂದ್ರೆ, ಬಹಳ ಒಳ್ಳೆಯ ಪ್ರಶ್ನೆ ಕೇಳಿದೆ ನೀನು. ಪರಿಸರ ನೆಟ್ಟಗಿದ್ರೆ, ಪರಿಸರ ಸ್ವಚ್ಛವಾಗಿದ್ರೆ, ಪರಿಸರನ ನಾವು ಅರ್ಥ ಮಾಡ್ಕೊಂಡು ಪರಿಸರದ ಜೊತೆಗೆ ನಾವು ಹೊಂದ್ಕೊಂಡು ಹೋದ್ರೆ ಪರಿಸರ ನಮ್ಮನ್ನು ಕಾಪಾಡುತ್ತೆ ಅಲ್ವಾ? ಈಗ ನಿಮ್ಮ ಮನೆ ಮುಂದೆ ಒಂದು ಮರವಿದೆಯಪ್ಪ, ಆ ಮರವನ್ನು ನೀವು ಕಡಿದ್ರೆ ನಿಮ್ಮ ಮನೆಯೊಳಗಡೆಯೆಲ್ಲ ಬಿಸಿಲು ಸೆಖೆ ಧಗೆ ಎಲ್ಲಾ ಬಂದು ತುಂಬಿಕೊಳ್ಳುತ್ತೆ. ಆ ಮರವನ್ನ ನೀನು ಹಾಗೆ ಬಿಟ್ರೆ ತಂಪಾದ ಗಾಳಿ ಬೀಸುತ್ತಾ ಇರುತ್ತೆ ನೀನು ಸಂತೋಷವಾಗಿರ್ಬಹುದು ಅಲ್ಲಿ. ಹೀಗೆ ಪರಿಸರವನ್ನು ನಾವು ರಕ್ಷಣೆ ಮಾಡಿದ್ರೆ ಆ ಪರಿಸರ ನಮ್ಮನ್ನು ಕಾಪಾಡುತ್ತೆ. ಹಾಗೇನೆ ನಮ್ಮ ಮಕ್ಕಳ ಮನೋಭಾವವನ್ನು ಅರ್ಥಮಾಡಿಕೊಂಡು ಅದನ್ನು ಬೆಳೆಸಿದ್ರೆ ನಮಗದರಿಂದ ಸಂತೋಷ ಸಿಗುತ್ತೆ ; ನಮ್ಮ ಮಕ್ಕಳು ಒಳ್ಳೆಯವರಾಗಿ ಬೆಳೆಯುತ್ತಾರೆ ನಾಳೆ. ಈ ಕಾರಣಕ್ಕೋಸ್ಕರ ನಾನು ಪರಿಸರ ಮತ್ತು ಮಕ್ಕಳು ನನ್ನ ದೃಷ್ಠಿಯಲ್ಲಿ ಎರಡೂ ಒಂದೇನೆ. ಇದನ್ನ ನಾವು ಕೆಡಿಸಬಾರ್ದು. ಪರಿಸರವನ್ನೂ ನಾವು ಕೆಡಿಸಬಾರದು; ಮಕ್ಕಳ ಮನಸ್ಸನ್ನೂ ಕೂಡ ನಾವು ಕೆಡಿಸಬಾರದು. ಈ ದೃಷ್ಠಿಯಲ್ಲಿ ನಾನು ಪರಿಸರ ಮತ್ತು ಮಕ್ಕಳನ್ನು ಒಂದೇ ದೃಷ್ಠಿಯಲ್ಲಿ ನೋಡುತ್ತಾ ಬರೀತಾ ಬಂದಿದ್ದೇನೆ.

**ಮಾಲತಿ ಎಚ್. ಎಂ. :** *ಸರ್, ನಮ್ಮೂರಿಗೆ ಮೊನ್ನೆ ಎಂಟು ಆನೆಗಳು ಬಂದಿದ್ವು. ಕಾಡು ಪ್ರಾಣಿಗಳು ಪದೇ ಪದೇ ನಾಡಿಗೆ ಬರ್ತಿವೆ. ಯಾಕೆ ಹೀಗಾಗ್ತಿದೆ?*

**ನಾ.ಡಿ.:** ಹಾಂ, ಇದು ಬಹಳ ಮುಖ್ಯವಾದ ಕಾರಣ ಇದು. ಆದರೆ ತಪ್ಪು ನಮ್ದೇನೆ. ಕಾಡಿನಲ್ಲಿ ನಾವಿವತ್ತು ಏನ್ ಮಾಡ್ತಾ ಇದ್ದೇವೆ? ಹೆದ್ದಾರಿಗಳನ್ನ ನಿರ್ಮಾಣ ಮಾಡ್ತಾ ಇದ್ದೇವೆ, ಅಣೆಕಟ್ಟುಗಳನ್ನು ಕಟ್ತಾ ಇದ್ದೇವೆ, ಕಾರ್ಖಾನೆಗಳನ್ನ ತೆಗಿತೀವಿ. ಇವತ್ತು ಕಾಡು ಅನ್ನೋದು ಹಿಂದಿನ ಕಲ್ಪನೆಯಲ್ಲಿ ಕಾಡಾಗಿ ಉಳಿದಿಲ್ಲ. ಕಾಡಲ್ಲಿ ಎಲ್ಲಾ ಗದ್ದಲಗಳನ್ನ ಎಲ್ಲಾ ಗಲಾಟೆಗಳನ್ನ ಎಲ್ಲಾ ಅನಾಹುತಗಳನ್ನ ನಾವು ಮಾಡ್ತಾ ಇದ್ದೇವೆ. ಅಂದಮೇಲೆ ಆ ಕಾಡಿನಲ್ಲಿಯೇ ಬದುಕಿರುವಂತ ಪ್ರಾಣಿಗಳು ಎಲ್ಲಿ ಹೋಗಬೇಕು ಹೇಳು? ಎಲ್ಲಿ ಹೋಗಬೇಕು ಪ್ರಾಣಿಗಳು? ಆನೆಗಳು ಎಲ್ಲಿ ಹೋಗಬೇಕು, ಹುಲಿಗಳು ಎಲ್ಲಿ ಹೋಗಬೇಕು? ಅವು ಏನು ಮಾಡ್ತಾವೆ. ಹತ್ತಿರದಲ್ಲಿರುವ ಊರಿಗೆ ಬರ್ತಾವೆ. ಅವಕ್ಕೇನು ಊರು ನೋಡುವ ಹುಚ್ಚಿಲ್ಲ. ಹುಲಿ ಮೈಸೂರು ನೋಡಬೇಕು ಅಂತ ಬರುವುದಿಲ್ಲ. ಅಲ್ಲಿ ಸಂತೋಷವಾಗಿದೆ ಅದು. ಆದರೆ ಮನುಷ್ಯ ಮಾಡ್ತಾನದಕ್ಕೆ ಪೇಟೆಗೆ ಬರುವ ಹಾಗೆ. ಮನುಷ್ಯನ ತಿನ್ನುವ ಹಾಗೆ ಮನುಷ್ಯನೇ ಮಾಡ್ತಾನೆ. ಇದು ಮನುಷ್ಯಂದೇ ತಪ್ಪು. ಪ್ರಾಣಿಗಳದ್ದು ಏನೂ ತಪ್ಪಿಲ್ಲ. ಅವಕ್ಕೆ ಬದುಕಲಿಕ್ಕೆ ಬೇಕಾದ ವಾತಾವರಣವನ್ನ ನಾವು ಸೃಷ್ಠಿ ಮಾಡಿದ್ರೆ ಅವು ಸಂತೋಷವಾಗಿ ತಮ್ಮ ಕಾಡಿನಲ್ಲಿ ಇರ್ತವೆ.

**ಮನೋಜ ಎಸ್.ಎಂ. :** *ಶಾಲೆಗಳು ಹೇಗಿರಬೇಕು ಅನ್ಸುತ್ತೆ ಸರ್ ನಿಮಗೆ?*

**ನಾ.ಡಿ.:** ಸಾಯಂಕಾಲ ನಾಲ್ಕು ಗಂಟೆ ಆದ ಕೂಡಲೆ ಕೊನೆ ಬೆಲ್ ಹೊಡಿಯತ್ತಲ್ಲ. ಆಗ ನೀವೆಲ್ಲ ಪಾಟಿಚೀಲವನ್ನು ಹೊತ್ತುಕೊಂಡು ಹೋ ಅಂತ ಕೂಗ್ತಾ ಹೊರಗೆ ಓಡ್ತೀರಲ್ಲ. ಯಾಕೆ ಓಡಿ ಹೋಗ್ತೀರಿ ನೀವೆಲ್ಲ? ನಿಮಗೆ ಒಂದು ಬಿಡುಗಡೆ ಸಿಗುತ್ತೆ ಕುಷಿ ಸಿಗುತ್ತೆ ಮನೆಗೆ ಹೋಗಬಹುದು ಅನ್ನೋ ಕುಷಿ ಸಿಗುತ್ತೆ ನಿಮಗೆ. ಆ ಕುಷಿ ನಮ್ಮ ಶಾಲೆಗಳಲ್ಲಿ ಸಿಗುತ್ತಿಲ್ಲ. ಆ ನಾಲ್ಕು ಗೋಡೆ ಒಳಗಡೆ ಮೇಸ್ಟ್ರು ಏನೋ ಕೊರಿತಾ ಇರ್ತಾರೆ. ಅದು ನಮಗೆ ಬೇಸರ ಆಗಿಬಿಡುತ್ತೆ. ಅದನ್ನ ತಪ್ಪಿಸಿಕೊಳ್ಳಲು ನಾವು ಕೊನೆ ಬೆಲ್ಲನ್ನ ಕಾಯ್ತಾ ಇರ್ತೇವೆ. ಹೀಗಾಗಿ ಗಂಟೆ ಹೊಡೆದ ಕೂಡಲೆ ನಾವು ಶಾಲೆಯಿಂದ ಹೊರಗೆ ಓಡ್ತೀವಿ. ಶಾಲೆ ಮಕ್ಕಳ ಪಾಲಿಗೆ ಒಳ್ಳೆಯ ವಾತಾವರಣವನ್ನು ಇವತ್ತು ಕಲ್ಪಿಸಿಲ್ಲ. ಎಲ್ಲಾ ಶಾಲೆಗಳ ಕತೆನೂ ಹೀಗೆ ಆಗಿದೆ. ಶಾಲೆ ಅಂದರೆ ಇಂದು ಬಂಧನ ಆಗಿದೆ. ಶಾಲೆ ಒಳ್ಳೆಯ ರೀತಿಯಲ್ಲಿರಬೇಕು. ಬೆಳಿಗ್ಗೆ ಎದ್ದಕೂಡಲೆ ಮಕ್ಕಳು ಶಾಲೆಗೆ ಹೋಗುವ ಉತ್ಸಾಹ ತೋರಿಸಬೇಕು. ಹಾಗೆ ಉತ್ಸಾಹ ತೋರಿಸುವಂತೆ ನಮ್ಮ ಶಿಕ್ಷಣ ಇರಬೇಕು, ನಮ್ಮ ಉಪಾಧ್ಯಾಯರಿರಬೇಕು, ಶಾಲೆಗಳನ್ನು ನಡೆಸುವಂತ ಸರ್ಕಾರ ಇರಬೇಕು. ಆವಾಗ ಮಕ್ಕಳು ಸಂತೋಷವಾಗಿ ಶಾಲೆಗೆ ಬರ್ತಾವೆ.

**ಅಂಜಲಿ :** *ಸರ್, ನಾವೂ ಕತೆಗಳನ್ನು ಬರೀತಾ ಇದ್ದೀವಿ. ನಮ್ಮದು ಅಳ್ಳೀಮರ ಪತ್ರಿಕೆ ಇದೆ. ಕತೆ ಬರಿಯೋಕೆ ಏನೇನು ಬೇಕು ಸರ್?*

**ನಾ.ಡಿ.:** ನೋಡಮ್ಮ ಕತೆ ಬರೀಲಿಕ್ಕೆ ಮೊದಲನೆಯದಾಗಿ ಭಾಷೆ ಬೇಕು. ಆ ಭಾಷೆ ಎಲ್ಲಿ ಸಿಗುತ್ತೆ? ಯಾವುದಾದ್ರೂ ಅಂಗಡಿಯಲ್ಲಿ ಸಿಗುತ್ತಾ? ಇಲ್ಲ. ಆ ಭಾಷೆ ನಿಮಗೆ ಸಿಗಬೇಕಾದ್ರೆ ಪುಸ್ತಕಗಳನ್ನ ಓದಬೇಕು. ನಿನಗೆ ಕತೆ ಬರೀಬೇಕು ಅನ್ನೋ ಆಸೆ ಇದ್ರೆ ನೀನು ಮತ್ತೊಬ್ರು ಬರೆದ ಕತೆಗಳನ್ನು ಓದಬೇಕು. ಅವರು ಹೇಗೆ ಬರ್ದಿದ್ದಾರೆ, ಯಾಕೆ ಹಾಗೆ ಬರ್ದಿದ್ದಾರೆ, ಸಂಭಾಷಣೆ ಹೇಗಿದೆ, ಪ್ರಾರಂಭ ಹೇಗೆ ಮಾಡಿದ್ದಾರೆ, ಮುಕ್ತಾಯ ಹೇಗೆ ಮಾಡಿದ್ದಾರೆ ಇದನ್ನೆಲ್ಲಾ ನೀನು ತಿಳಕೋಬೇಕು. ತಿಳ್ಕೊಂಡ ಮೇಲೆ ನೀನು ಕತೆ ಬರೀಲಿಕ್ಕೆ ಪ್ರಾರಂಭ ಮಾಡಬೇಕು. ನಿನಗೊಂದು ವಸ್ತು ಸಿಗುತ್ತೆ ಅಂತಿಟ್ಟುಕೊ, ಬೇಡ ನೀನೇನೂ ಕಷ್ಟಪಡಬೇಡ. ನಿಮ್ಮಜ್ಜಿ ಹತ್ತಿರ ಒಂದು ಕತೆ ಕೇಳು. ಅಜ್ಜಿ ಇದ್ದಾರಾ ನಿಂಗೆ?

**ಅಂಜಲಿ :** *ಇದ್ದಾರೆ ಸಾ*

**ನಾ.ಡಿ.:** ಅಜ್ಜಿ ಹತ್ತಿರ ಕತೆ ಕೇಳು. ಅಜ್ಜಿ ಹೇಳಿದ ಕತೆನಾ ನಿನ್ನದೇ ವಾಕ್ಯದಲ್ಲಿ ನೀನು ಕುತ್ಕೊಂಡು ಬರಿ. ಅದೇ ಕತೆ, ಅದೇ ಕತೆಯನ್ನ ನಿನ್ನದೇ ಸ್ಟೈಲ್‌ನಲ್ಲಿ ನಿನ್ನದೇ ವಾಕ್ಯದಲ್ಲಿ ಬರೆ. ಹಾಗೆ ಕತೆಗಳನ್ನ ಬರೀತಾ ಬರೀತಾ ಅಭ್ಯಾಸ ಮಾಡಬಹುದು, ಕತೆಗಳನ್ನ ಬರೆಯುವ ಕಲೆಯನ್ನ ನಾವು ಸಾಧಿಸಿಕೋಬಹುದು. ಯಾವುದೇ ವಿಷಯದಲ್ಲಿ ನಿರುತ್ಸಾಹ ಬೇಡ. ನನ್ನಲ್ಲಿ ಬರೆಯುವ ಸಾಧ್ಯತೆ ಇದೆ ನಾನು ಖಂಡಿತಾ ಬರೀತೇನೆ ಅಂತ ಹಟ ಹಿಡಿದುಕೊಂಡು ಬರೆದರೆ ನೀನೂ ಕೂಡ ದೊಡ್ಡ ಲೇಖಕಿ ಆಗ್ತೀಯ.

**ಶೇಖರ ಎಚ್. ಎಸ್. :** *ಸರ್ ಈಗಿನ ಕವನಗಳು ಹಾಡುವುದಕ್ಕೇ ಆಗ್ತಿಲ್ಲ. ನಾವೆಲ್ಲ ಈಗ್ಲೂ ಹಾಡ್ತಿರುವುದು ಬಹಳ ಹಿಂದೆ ಬರೆದಿರುವ ಹಾಡುಗಳೆ. ಯಾಕಿಂಗೆ ಸರ್?*

**ನಾ.ಡಿ.:** ನೀನು ಬಹಳ ಒಳ್ಳೆಯ ಪ್ರಶ್ನೆ ಕೇಳಿದ್ಯೆಪ್ಪ. ಏನಾಗಿದೆ ಅಂದ್ರೆ, ಈಗಿನ ಕವಿತೆಗಳೆಲ್ಲ ಬೇರೆ ದೇಶದ ಸಾಹಿತ್ಯವನ್ನ ಪ್ರಭಾವಕ್ಕೆ ಒಳಗಾಗಿ ಬರೀತಾ ಇದ್ದಾರೆ. ಇಂಗ್ಲಿಶ್ ಸಾಹಿತ್ಯದ ಪ್ರಭಾವಕ್ಕೆ ಒಳಗಾಗಿ ಕವಿತೆಗಳನ್ನ ಬರೀತಾ ಇದ್ದಾರೆ. ನಮ್ಮ ಲೇಖಕರಲ್ಲಿ ಮತ್ತೊಂದು ನಂಬಿಕೆ ಇದೆ. ಏನಂದ್ರೆ, ಹಾಡುವ ಕವಿತೆ ಬೇರೆ ಓದುವ ಕವಿತೆ ಬೇರೆ ಅಂತ ಕಲ್ಪನೆ ಇದೆ ನಮ್ಮಲ್ಲಿ. ಹೀಗಾಗಿ ಬಹಳ ಜನ ಇವತ್ತು ಹಾಡುವ ಕವಿತೆಗಳನ್ನ ಬರೆಯುವುದಿಲ್ಲ. ಹಾಡು ಅಂದ್ರೆ ಕವಿತೆ ಅಲ್ಲ ಅದು ಹಾಡು ಅಂತ ಅವರು ಹೇಳ್ತಾರೆ. ಆದರೆ ಇದು ತಪ್ಪು ಕಲ್ಪನೆ. ಹಾಡಿನ ಮೂಲಕವೂ ಕವಿತೆಯ ಸತ್ವವನ್ನ ಹೇಳಬಹುದು. ನಮ್ಮ ಪಾಡಿಗೆ ನಾವು ಬರೆದರೆ ಆಯ್ತು. ಈಗ ಗೋಪಾಲಕೃಷ್ಣ ಅಡಿಗರಂತ ಕವಿಗಳ ಕವಿತೆಗಳನ್ನ ಇವತ್ತೂ ಹಾಡ್ತಾ ಇದ್ದಾರೆ. ಕವಿತೆ ಚನ್ನಾಗಿದೆ ಅಂದ್ರೆ ಯಾರಾದ್ರೂ ಹಾಡ್ತಾರೆ.

**ಕುಸುಮ ಎಚ್. ಜಿ :** *ಸರ್, ನೀವು ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದೀರಿ. ನಿಮಗೆ ಹೇಗನ್ನಿಸ್ತು ಸಾರ್?*

**ನಾ.ಡಿ.:** (ನಗು)ಏನು ಅನ್ಸುದಿಲ್ಲ ಸ್ವಲ್ಪ ಸಂತೋಷ ಆಗುತ್ತೆ. ಯಾಕಂದ್ರೆ, ನಾನು ಸುಮಾರು ಐವತ್ತು ವರ್ಷಗಳಿಂದ ಬರೀತಾ ಬಂದಿದ್ದೇನೆ ಕನ್ನಡದಲ್ಲಿ. ನಾನು ಬರೆದ ಕತೆಗಳು, ಕಾದಂಬರಿಗಳು, ಮಕ್ಕಳ ಪುಸ್ತಕಗಳನ್ನ ಬಹಳ ಜನ ಓದಿದ್ದಾರೆ. ಹೀಗೆ ಓದಿದವರಿಗೆ ನನ್ನನ್ನ ಅಧ್ಯಕ್ಷ ಮಾಡಬೇಕು ಅನ್ನಿಸಿದೆ; ಅದೊಂದು ಸಂಪ್ರದಾಯ ನಮ್ಮಲ್ಲಿ. ಬಹಳ ದೊಡ್ಡ ಲೇಖಕರನ್ನು ಅಧ್ಯಕ್ಷ ಅಂತ ಕರೆದು, ಗೌರವಿಸಿ ಅವರ ಮಾತುಗಳನ್ನು ಕೇಳುವುದು ಸಾವಿರಾರು ಜನ ಸೇರುವುದು ಒಂದು ಸಂಪ್ರದಾಯ ನಮ್ಮಲ್ಲಿ. ಹಾಗಾಗಿ ನನ್ನನ್ನೂ ಕೂಡ ಈ ಸಲ ಅಧ್ಯಕ್ಷ ಅಂತ ಮಾಡಿದ್ದಾರೆ. ಜನವರಿ ತಿಂಗಳಲ್ಲಿ ಕೊಡಗಿನಲ್ಲಿ ನಡೆಯುವ ಸಾಹಿತ್ಯ ಸಮ್ಮೇಳನಕ್ಕೆ ನಾನು ಅಧ್ಯಕ್ಷ ಅಂತ ನೇಮಕವಾಗಿದ್ದೇನೆ.

**ಸಿದ್ಧ ಎಚ್.ಕೆ. :** *ನೀವು ಹಿರಿಯ ಸಾಹಿತಿಯಾಗಿದ್ದರೂ ನಮ್ಮಂತಹ ಮಕ್ಕಳ ಜೊತೆ ಇಷ್ಟು ಪ್ರೀತಿಯಿಂದ ಮಾತಾಡ್ತೀರಿ. ಕೆಲವು ದೊಡ್ಡ ಸಾಹಿತಿಗಳ ಹತ್ತಿರ ಹೋಗೋದಕ್ಕೂ ಆಗುವುದಿಲ್ಲ. ಒಬ್ಬ ಸಾಹಿತಿ ಹೇಗಿರಬೇಕು ಸಾರ್?*

**ನಾ.ಡಿ.:** ಸಾಹಿತಿಯಾದವನು ಸರಳವಾಗಿರಬೇಕು. ನಾನು ಬರೆದಿದ್ದು ನಿಮಗೆ ಹೇಗೆ ಅರ್ಥವಾಗುತ್ತೋ, ಹಾಗೆ ನಾನೂ

ಕೂಡ ನಿಮಗೆ ಅರ್ಥವಾಗಬೇಕು. ಅಲ್ಲಿ ದೊಡ್ಡಸ್ತಿಕೆ ಗಿಡ್ಡಸ್ತಿಕೆ ಏನೂ ಇಲ್ಲ. ದೊಡ್ಡವರ ಹತ್ತಿರ ಮಾತ್ರ ಮಾತಾಡಬೇಕು ಚಿಕ್ಕವರ ಹತ್ತಿರ ಮಾತಾಡಬಾರದು ಅಂತೇನೂ ಇಲ್ಲ. ಅದು ಕೆಲವರ ಸ್ವಭಾವ. ಕೆಲವರು ಬಹಳ ಗಂಭೀರವಾಗಿ ಕುತಿರ್ತಾರೆ ಕೆಲವರು ನಗ್ತಾ ನಗ್ತಾ ಇರ್ತಾರೆ. ಅದು ಅವರವರ ಸ್ವಭಾವಕ್ಕೆ ಬಿಟ್ಟಿದ್ದು. ನನಗೆ ಮಕ್ಕಳ ಜೊತೆ ಆಗಲಿ, ಯಾರ ಜೊತೆಗಾಗಲಿ ನಗ್ತಾ ನಗ್ತಾ ಮಾತಾಡೋದು ಅಭ್ಯಾಸ. ಹೀಗಾಗಿ ನಿಮ್ಮ ಜೊತೆ ನಗ್ತಾ ಮಾತಾಡ್ತೀನಿ. ಅದರಲ್ಲಿ ದೊಡ್ಡಸ್ತಿಕೆ ಏನೂ ಇಲ್ಲ. ನನ್ನ ಸ್ವಭಾವ ಇದು ನಾನು ಹೀಗೆ ಮಾತಾಡ್ತೀನಿ ಅಷ್ಟೆ.

**ಈ ಅಪರೂಪದ ಸಂದರ್ಭನವು ಹತ್ತನೇ ತರಗತಿಯ ವಿದ್ಯಾರ್ಥಿಗಳ ಸಮ್ಮುಖದಲ್ಲಿ ನಡೆಯಿತು. ದೂರವಾಣಿಯಲ್ಲಿ ನಡೆದ ಈ ಸಂವಾದಕ್ಕೆ ಅವಕಾಶ ಮಾಡಿಕೊಟ್ಟ ನಾಡಿನ ಮಕ್ಕಳ ನಾಡಿಮಿಡಿತವ ಹಿಡಿದು ಮಕ್ಕಳಿಗಾಗಿಯೇ ಸಾಕಷ್ಟು ಬರೆದು ಈಗ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆಯನ್ನು ವಹಿಸಲಿರುವ ಮಕ್ಕಳ ಪ್ರೀತಿಯ ಡಾ. ನಾ. ಡಿಸೋಜ ಅವರಿಗೆ ಹೆಗ್ಗಡಹಳ್ಳಿ ಪ್ರೌಢಶಾಲೆ ಹಾಗೂ ಅಳ್ಳೀಮರದ ವತಿಯಿಂದ ಆತ್ಮೀಯ ಅಭಿನಂದನೆಗಳು**

*************************************

**ಆನಮರಿಯ ಆತ್ಮಕಥನದಿಂದ....**

**...ನಾನಾಗ ಚಿಕ್ಕವ. ಆ ವರ್ಷ ಚಂದಾಗಿ ಮಳ ಹೂದು ಕಾಡೂ ನಾಡೂ ಹಸರಾಗಿತ್ತು. ಕಾಡಂಚಿನಾಗ ಜನ ಕಬ್ಬು ಬೆಳದು ನಮ್ಮ ಹೊಟ್ಟಗ ಹುಚ್ಚು ಹಿಡಿಸ್ಬುಟ್ಟಿದ್ದರು. ನನ್ನವ್ವ ಹೇಳ್ತಿದ್ಲೂ, ಆ ಕಬ್ಬು ಬೆಳೆದ ಜಾಗದಾಗ ಹಿಂದ್ಕ ಕಾಡಿದ್ದು ಅಲ್ಲೀಯ ಅವ್ವ ಹುಟ್ಟಿದ್ದಂತ. ಈಗ ಜನವೆಲ್ಲ ಅಲ್ಲಿ ಗದ್ದ ಮಾಡ್ಕಂಡು ಕಬ್ಬು ಬೆಳದು ಕರೆಂಟಿನ ಬೇಲಿ ಹಾಕ್ಬುಟ್ಟಾರ. ಆ ಕಬ್ಬು ತಿನ್ನಾಕ ಅವ್ವ ನಮ್ಮವರ ಬಳಗ ಮಾಡ್ಕಂಡು ಬಂದಾಗ ಜನ್ಗಳು ನಮ್ಮ ದಾರಿ ತಪ್ಪಸ್ಬುಟ್ಟು ಊರೊಳಗ ಅಟ್ಟಿದ್ರು.**

**ನಾವೆಲ್ಲ ದಾರಿ ತಪ್ಪಿಸ್ಕಂಡು ನಡೀತಾ ನಡೀತಾ ಅರ್ಮನದೂರು ಮಯ್ಸೂರಿಗ ಬಂದ್ಬಿಟ್ಟಿದ್ದೋ. ಅಲ್ಲಿ ಜನವೋ ನಮ್ಮನ್ನ ನೋಡ್ಬುಟ್ಟು ಇವ್ರನ್ನೆಲ್ಲಾ ಹೀಗೆ ಬುಟ್ರ ಹಿಂದ್ಕ ಒಂದ್ಸಲ ಬಂದು ಕೊಲೆ ಮಾಡಿದಾಂಗ ಜನಗಳನ್ನ ತುಳುದಾಕ್ತಾರ ಅಂದ್ಕಂಡು ನಮ್ಮನ್ನೆಲ್ಲಾ ಸುತ್ತರಿದು ಬುಟ್ಟಿದ್ದರು. ಆದರ ನನ್ನವ್ವ ಗುಂಪಿನೊಳಗ 'ನೋಡ್ರ್ರಲಾ ಯಾನೇ ಆದ್ರೂ ಯಾರೂವಿ ರೊಚ್ಚಿಗೇಳ್ಬಾರ್ದು ಕೂಸದ ಗ್ಯಾನಾಗಿ ನೋಡ್ಕಬೇಕು. ಹ್ಯಾಂಗೂ ಬಂದೀವಿ ಯಾರ್ಗೂ ಏನೂ ಆಗದಂಗ ಕಾಡು ಸೇರ್ಕಬೇಕು' ಅಂದು ನನ್ನ ತಬ್ಬಿಕೊಂಡಿದ್ದಳು.**

**ಅವ್ವ ನಮ್ಮನ್ನೆಲ್ಲ ಕಾಡಿಗ ಕರ್ಕೊಂಡೋಗಾಕ ಚಿಂತ ಮಾಡ್ತಿದ್ರ ನಂಗ ಅರ್ಮನ ನೋಡೋ ಆಸ ಅಗತ್ಕಂಡಿತ್ತು. ಮುಂದ್ಕ ಈ ಊರ್ಗ ಬತ್ತಿವೋ ಇಲ್ವೋ ಈಗ ಹ್ಯಾಂಗೂ ಬಂದೀವಿ ನೋಡ್ಕಂದು ಹೋಗಾವ ಅನ್ನಾವ ಅಂದ್ರ ಅವ್ವನ ಮುಕ ನೋಡಾಕ ಆಗ್ತಿರ್ನಿಲ್ಲ.**

**ನಮ್ಮನ್ನೆಲ್ಲಾ ಕಾಡಿಗ ಕಳ್ಸಾಕ ಊರಾಗಿನ ಆನ ಬಂದಿದ್ದೋ. ಅವ್ರನ್ನೆಲ್ಲ ನೋಡ್ಬುಟ್ಟು ನಂಗ ಬೇಜಾರು. ಯಾಕಂದ್ರ ಅವ್ರೆಲ್ಲ ಮನುಷ್ಯರು ಹೇಳ್ದಂಗ ಕೇಳ್ಬೇಕು. ಅಣ್ಣಾ ನೀವೂ ನಮ್ಜೊತ್ಗ ಕಾಡಿಗ ಬನ್ನಿ ಅಂತ ಕರಿಯಾಕ ಹೋಗಿದ್ದೆ. ಅವ್ವ ನನ್ನ ತಡ್ದು "ಕೂಸೆ ಆ ಮುಂಡೆಮಕ್ಳು ನಿನ್ನೂವಿ ಹಿಡ್ಕಂಡು ಕೂಡಾಕ್ತಾರ, ಅವ್ರು ಇಲ್ಲೇ ಇರ್ಲಿ ನಾವು ಮೊದ್ಲು ಕಾಡ್ಗ ಹೋಗಾವ" ಅಂದಿದ್ಲು.**

**ನಮ್ಗೆಲ್ಲ ಮಯ್ಸೂರು ನೋಡ್ಬೇಕು ಅಂತಿರ್ಲಿಲ್ಲ. ಪ್ರವಾಸಕ್ಕೋಗೊ ಅಬ್ಯಾಸವೂ ನಮ್ಗಿಲ್ಲ. ಕಬ್ಬು ನಮ್ಗ ಇಷ್ಟ. ಆದರ ಬೆಳಿಯಾಕ ಗೊತ್ತಿಲ್ಲ. ಬೆಳ್ದಿರಾದ್ನ ತಿನ್ನಾವ ಅಂತ ಬಂದ್ರ ನೀವೆಲ್ಲ ಸೇರ್ಕಂಡು ನಮ್ಮನ್ನ ದಾರಿ ತಪ್ಪಿಸ್ಬುಟ್ರಿ. ನೀವು ನಮ್ಮ ಆಸೆಗಳಿಗೆ ಕರೆಂಟಿನ ಬೇಲಿ ಮಡ್ಗಿ ನಮ್ಮನ್ನ ಸಾಯ್ಸಾಕ ನೋಡ್ತೀರಿ.**

**ಪ್ರೀತಿಯ ಮನುಷ್ಯರೇ, ನಾಡು ನಿಮ್ದು ಸರಿ. ಕಾಡೂ ನಿಮ್ದಾ? ನಿಮ್ಗ ಜೀವಪ್ರೀತಿ ಅನ್ನೋದೇ ಇಲ್ವಾ? ನಿಮ್ಮಂತೆ ಇನ್ನೊಬ್ರು ಬದುಕಬೇಕು ಅಂತ ಇಷ್ಟೂ ಅನ್ಸಲ್ವಾ? ಈ ಕಾಡನ್ನ ನಮ್ದೂ ಅಂತ ನಾವು ಬೇಲಿ ಹಾಕಾದಿಲ್ಲ; ನೀವೂ ಬನ್ನಿ. ಆದರೆ ಇರುವಷ್ಟು ಕಾಲ ನಮ್ಗ ಬದುಕಾಗ ಬಿಡಿ. ಹಸಿವಿಂದ ಸಾಯೋ ಹಾಗೆ ಮಾಡ್ಬೇಡಿ. ನಿಮಗ ಬೆಳೆ ಬೆಳೆಯೋದು ಗೊತ್ತಿದೆ. ಆದರೆ ನಾವು ಈ ಕಾಡಲ್ಲಿ ಬೆಳೆದಿರೋದ್ನ ಮಾತ್ರ ತಿನ್ನಬೇಕು.**

**ಕಾಡು ನಮ್ಮ ಜೀವ ಬದುಕು. ಕಾಡನ್ನ ಉಳಸಿದ್ರೆ ನಾವೆಲ್ಲ ಉಳತೀವಿ. ನಿಮ್ಮ ಬಗ್ಗೆ ಈಗಲೂ ಪ್ರೀತಿಯಿದೆ. ನಮ್ಮನ್ನ ಬದುಕಲು ಬಿಡಿ ಪ್ಲೀಸ್**

**ಆನೆಮರಿ**



(ಈ ತಿಂಗಳ ಆರಂಭದಲ್ಲಿ ಮಯ್ಸೂರಿಗೆ ಬಂದಿದ್ದ ಎಂಟಾನೆ ಹಿಂಡುಗಳು ನಮ್ಮ ಹೆಗ್ಗಡಹಳ್ಳಿಯ ಬಳಸಿಕೊಂಡೆ ಹೋಗಿದ್ದವು. ಆ ಹಿಂಡಿನ ಮರಿಯಾನೆ ಆತ್ಮಕಥೆ ಬರೆದಿದ್ದರೆ...? ಆನೆಪ್ರೀತಿಯ ಬರಹವಿದು)

## ಕನಸು ಕವಿತೆಗಳು

**ಬೇಕು**

ನನಗೆ ಪುಸ್ತಕ ಬೇಕು
ಕತೆ ಓದುತ ಕಾಲ ಕಳೆಯಬೇಕು
ನನಗೆ ಕವನ ಬೇಕು
ಹಾಡುತ ನಲಿಯಬೇಕು

ನನಗೆ ಮಳೆಯಾಗುವುದು ಬೇಕು
ಮಳೆಯಲಿ ನಡೆಯುತ ಮಜಾ ಮಾಡಬೇಕು
ಹಾಗೆ ಮಾಡಿದರೆ ಅಪ್ಪ ಬೈಯುವರು
ನನಗದೇ ಬೇಜಾರು

**ಚಿಟ್ಟೆ**

ಚಿಟ್ಟೆ ಚಿಟ್ಟೆ
ಬಣ್ಣದ ಚಿಟ್ಟೆ
ನಿನ್ನ ಹಿಡಿಯಲು ಹೋದಾಗ ಬಿದ್ದೆಬಿಟ್ಟೆ
ನೀ ದೂರ ಹಾರಿಬಿಟ್ಟೆ
ನನ್ನ ಕಾಲಿಗೆ ಬಾರೀ ಪೆಟ್ಟೆ
ನಿನ್ನ ಕೂಡ ಟೂ ಬಿಟ್ಟೆ

**–ಕನಸು**

( ಧಾರವಾಡದ ಬಾಲಬಳಗದಲ್ಲಿ ನಾಲ್ಕನೇ ತರಗತಿ ಓದುತ್ತಿರುವ ಕನಸು ಕನ್ನಡದ ಪ್ರಸಿದ್ಧ ಕವಯಿತ್ರಿ ವಿಭಾ ಮತ್ತು ಪುಸ್ತಕ ಪ್ರಕಾಶಕ ಬಸವರಾಜ ಸೂಳಿಭಾವಿ ಅವರ ಮಗಳು)

************************************************************



**ಪ್ಲಾಸ್ಟಿಕ್ ಭೂತ**

ನಮ್ಮ ಶಾಲೆಯ ವಿದ್ಯಾರ್ಥಿಗಳು ಪ್ರದರ್ಶಿಸಿದ ಪ್ಲಾಸ್ಟಿಕ್ ಭೂತ ನಾಟಕ ವಿಜ್ಞಾನ ನಾಟಕ ಸ್ಪರ್ಧೆಗಳಲ್ಲಿ ಮಯ್ಸೂರು ಜಿಲ್ಲಾಮಟ್ಟದಲ್ಲಿ ಮೊದಲ ಬಹುಮಾನ ಅಲ್ಲದೆ, ಅತ್ಯುತ್ತಮ ನಟ (ರೋಹಿತ್ ಕುಮಾರ್ ಎಚ್. ಎಂ.) ಅತ್ಯುತ್ತಮ ನಟಿ (ಆಶಾ ಎಚ್. ಎಚ್.) ಅತ್ಯುತ್ತಮ ನಿರ್ದೇಶನ ಮತ್ತು ಅತ್ಯುತ್ತಮ ನಾಟಕ ರಚನೆ ಬಹುಮಾನ ಪಡೆಯಿತು. ವಿಭಾಗಮಟ್ಟದ ವಿಜ್ಞಾನ ನಾಟಕ ಸ್ಪರ್ಧೆಯಲ್ಲಿ ಇದೇ ನಾಟಕ ದ್ವಿತೀಯ ಬಹುಮಾನ, ಅತ್ಯುತ್ತಮ ನಟ ( ರೋಹಿತ್ ಕುಮಾರ್ ಎಚ್. ಎಂ.) ಮತ್ತು ಅತ್ಯುತ್ತಮ ನಾಟಕ ರಚನೆ ಬಹುಮಾನ ಪಡೆಯಿತು.

ಮಯ್ಸೂರು ಡಯಟ್‌ನಲ್ಲಿ ವಿಭಾಗಮಟ್ಟದ ನಾಟಕ ಸ್ಪರ್ಧೆಯ ವಿಜೇತರಿಗೆ ನೀಡುವ ಪ್ರಶಸ್ತಿ ಪತ್ರದಲ್ಲಿ ನಮ್ಮ ಶಾಲೆಯ ಪ್ಲಾಸ್ಟಿಕ್ ಭೂತ ನಾಟಕದ ಚಿತ್ರಗಳನ್ನು ಮುದ್ರಿಸಿ ಡಯಟ್ ನಮ್ಮ ಶಾಲೆಗೆ ಅಪೂರ್ವ ಗೌರವ ನೀಡಿತ್ತು. ಆ ಅಭಿಮಾನಕ್ಕಾಗಿ ಡಯಟ್ ಸಂಸ್ಥೆಯ ಎಲ್ಲರಿಗೂ ನಮ್ಮ ಶಾಲೆ ಮತ್ತು ನಮ್ಮ ನಾಟಕ ತಂಡ ಆಭಾರಿಯಾಗಿದೆ.

ನಮ್ಮ ನಡುವಿದ್ದುಕೊಂಡೇ ನಮಗೆ ಮಾರಕವಾಗಿರುವ ಪ್ಲಾಸ್ಟಿಕ್ ಬಗ್ಗೆ ತಿಳುವಳಿಕೆ ನೀಡುವ ಈ ನಾಟಕ ಸ್ಪರ್ಧೆಗಳಲ್ಲಿ ಮಾತ್ರವಲ್ಲದೆ ನಂಜನಗೂಡಿನ ಹಲವು ವೇದಿಕೆಗಳಲ್ಲಿ ಪ್ರದರ್ಶನ ಕಂಡಿದೆ. ಈ ನಾಟಕಕ್ಕಾಗಿ ತಮ್ಮ "ಒಂದೂರಿನಲ್ಲಿ" ಕವಿತೆಯನ್ನು ಬಳಸಿಕೊಳ್ಳಲು ಕವಿ ಶ್ರೀ ಜಿ.ಪಿ. ಬಸವರಾಜು ಅವರು ಅನುಮತಿ ನೀಡಿದ್ದರು. ಹಿರಿಯರೂ ಹಾಗೂ ನಾಡಿನ ಖ್ಯಾತ ವಿಜ್ಞಾನ ಬರಹಗಾರರಾದ ಶ್ರೀ ನಾಗೇಶ ಹೆಗಡೆಯವರು ಅಮೂಲ್ಯ ಸಲಹೆಗಳನ್ನು ನಾಟಕಕ್ಕೆ ನೀಡಿದ್ದರು. ಡಾ. ನಿ. ಮುರಾರಿ ಬಲ್ಲಾಳರ "ಪ್ಲಾಸ್ಟಿಕ್ ಕಶ್ಮಲ; ಎಚ್ಚರಿಕೆ ಅಗತ್ಯ" ಲೇಖನ ಈ ನಾಟಕಕ್ಕೆ ಪ್ರೇರಣೆ. ಈ ಎಲ್ಲಾ ಹಿರಿಯರಿಗೂ ನಮ್ಮ ನಾಟಕ ತಂಡ ಋಣಿಯಾಗಿದೆ.

***ನಮ್ಮ ನಾಟಕ ತಂಡ***

**ರೋಹಿತ್ ಕುಮಾರ್ ಎಚ್.ಎಂ., ಆಶಾ ಎಚ್.ಎಚ್., ಅಮೃತ ಎಚ್.ಎಸ್., ಸಂಜನಾ ಎಚ್.ಆರ್., ಸಂದೇಶ ಎಚ್.ಎಂ., ರಾಕೇಶ ವಿ., ಮಮತ ಎಚ್.ಎನ್., ಮಹದೇವಸ್ವಾಮಿ ಎಚ್.ಎನ್., ಮನುಕುಮಾರ್**

**ನಾಟಕ ರಚನೆ, ನಿರ್ದೇಶನ: ಸಂತೋಷ ಗುಡ್ಡಿಯಂಗಡಿ**



## ಆರಿದ ಮಹಾಬೆಳಕು : ನೆಲ್ಸನ್ ಮಂಡೇಲಾ

**ತನ್ನ ಜೀವಿತದ ಸುದೀರ್ಘ 27 ವರ್ಷಗಳನ್ನು ಜೈಲಿನಲ್ಲಿ ಕಳೆದರೂ ತನ್ನ ಜೀವನೋತ್ಸಾಹವನ್ನು ಕಳೆದುಕೊಳ್ಳದೆ ನಗು ನಗುತ್ತಾ ಬದುಕಿದ ಮಹಾನ್ ಚೇತನ ನೆಲ್ಸನ್ ರೋಲಿಹ್ಲಾಹ್ಲಾ ಮಂಡೇಲಾ ಡಿಸೆಂಬರ್ 6ರಂದು ಈ ಜಗತ್ತಿಗೆ ವಿದಾಯ ಹೇಳಿದರು.**

**1998ರ ಜುಲೈ 18ರಂದು ದಕ್ಷಿಣ ಆಫ್ರಿಕಾದ ಕುನು ಎಂಬ ಹಳ್ಳಿಯಲ್ಲಿ ಜನಿಸಿದ್ದರು ರೋಲಿಹ್ಲಾಹ್ಲಾ ಮಂಡೇಲಾ. ನೆಲ್ಸನ್ ಮಂಡೇಲಾ ಎಂಬುದು ಶಾಲೆಯಲ್ಲಿ ಅವರಿಗೆ ಸೇರಿಕೊಂಡ ಹೆಸರು. ನೆಲ್ಸನ್ ಬಿಳಿಯ ಪ್ರಭುತ್ವದ ಕೊಡುಗೆ. ಶಾಲೆಗೆ ಸೇರಿದ ಪ್ರತಿಯೊಬ್ಬ ಕರಿಯ ವಿದ್ಯಾರ್ಥಿಗೂ ಇಂಗ್ಲಿಶ್ ಹೆಸರುಗಳನ್ನು ನೀಡುವುದು ಆಗಿನ ದಕ್ಷಿಣ ಆಫ್ರಿಕಾದ ವಾಡಿಕೆಯಾಗಿತ್ತು.**

**ಶಾಲೆಗೆ ಹೋಗುವುದು, ಕುರಿ ಕಾಯುವುದು, ಊಳುವುದು, ಕವಣೆಯಿಂದ ಹಕ್ಕಿಗಳನ್ನು ಹೊಡೆಯುವುದು, ಮಂಡೇಲಾರ ಬಾಲ್ಯದ ದಿನಚರಿಯಾಗಿತ್ತು. ಸಮಾಜದಲ್ಲಿ ಕರಿಯರನ್ನು ಬಿಳಿಯರು ನಡೆಸಿಕೊಳ್ಳುತ್ತಿದ್ದ ಕ್ರೌರ್ಯ ರೀತಿ ಮಂಡೇಲಾರಿಗೆ ಜೋಹಾನ್ಸ್‌ಬರ್ಗ್‌ಗೆ ಬಂದ ಮೇಲೆ ಮನದಟ್ಟಾಗುತ್ತದೆ.**

**ಮುಂದೆ ನೆಲ್ಸನ್ ಮಂಡೇಲಾ ನಡೆದದ್ದು ಹೋರಾಟದ ಹಾದಿಯಲ್ಲಿ. ದಕ್ಷಿಣ ಆಫ್ರಿಕಾದಲ್ಲಿನ ವರ್ಣಭೇದ ನೀತಿಯ ವಿರುದ್ಧ ಹೋರಾಡಿ ಸರ್ಕಾರದ ಕೆಂಗಣ್ಣಿಗೆ ಗುರಿಯಾಗಿ 27ವರ್ಷಗಳ ಕಾಲ ಜೈಲು ಶಿಕ್ಷೆ ಅನುಭವಿಸಿದರು. ಜೈಲಿನಲ್ಲಿದ್ದೆ ತಮ್ಮ ಆತ್ಮಕತೆ "ಲಾಂಗ್ ವಾಕ್ ಟು ಫ್ರೀಡಂ" ಬರೆದರು. ವಿಶೇಷವೆಂದರೆ ಈ ಬರಹವನ್ನು ಜೈಲಿನ ಅಧಿಕಾರಿಗಳಿಗೆ ಸಿಗದಂತೆ ಜತನದಿಂದ ಕಾಪಾಡಿ ಈ ಜಗತ್ತಿಗೆ ತಲುಪಿಸಿದ್ದು ಭಾರತೀಯ ಸಂಜಾತ ಆಫ್ರಿಕನ್ ಸತ್ಯೇಂದ್ರನಾಥ್ ರಘುನಾನನ್ ಅಲಿಯಾಸ್ ಮ್ಯಾಕ್ ಮಹಾರಾಜ್.**

**"ಮುಂದಿನ ಪೀಳಿಗೆಯ ಮಕ್ಕಳು ಸ್ವಾತಂತ್ರ್ಯದ ಪರಿಸರದಲ್ಲಿ ಜನ್ಮತಾಳಬೇಕು" ಎಂದು ಹಂಬಲಿಸಿದ್ದ ಈ ಮಹಾನ್ ಚೇತನ ಬದುಕಿದ್ದಾಗಲೇ ದಂತಕತೆಯಾದವರು. ದಕ್ಷಿಣ ಆಫ್ರಿಕಾದ ಮೊಟ್ಟಮೊದಲ ಕಪ್ಪುವರ್ಣದ ಅಧ್ಯಕ್ಷರಾದವರು. ತನ್ನ 90ರ ಹರೆಯದಲ್ಲೂ ಪುಟ್ಟ ಮಗುವಿನಂತೆ ನಗುವ ಮಂಡೇಲಾ ಮಾನವೀಯತೆಯ ಸಾಕಾರ ಮೂರ್ತಿ. ದಕ್ಷಿಣ ಆಫ್ರಿಕಾದ ಜನತೆ ಇವರನ್ನು ಪ್ರೀತಿಯಿಂದ "ಮಡಿಬಾ" ಎಂದು ಕರೆಯುತ್ತಾರೆ.**

**ಶಾಂತಿ ನೊಬೆಲ್ ನೀಡುವುದಕ್ಕೆ ಮೊದಲೇ ನಮ್ಮ ದೇಶ ಈ ಮಹಾತ್ಮನಿಗೆ ಭಾರತ ರತ್ನ ನೀಡಿ ಗೌರವಿಸಿತ್ತು. ಮಹಾತ್ಮ ಗಾಂಧಿ ಎಂದರೆ ಅಪಾರವಾಗಿ ಗೌರವಿಸುತ್ತಿದ್ದ ಈ ಮಹಾತ್ಮ ತೀರಿಕೊಂಡಿದ್ದು ಡಿಸೆಂಬರ್ 6ರಂದು. ಅದು, ಭಾರತದಲ್ಲಿನ ಅಸ್ಪೃಶ್ಯತೆ, ಜಾತಿ ತಾರತಮ್ಯದ, ಅಸಮಾನತೆಯ ವಿರುದ್ಧ ಹೋರಾಡಿದ ಭಾರತದ ಮಹಾನ್ ಚೇತನ ಬಾಬಾ ಸಾಹೇಬ್ ಅಂಬೇಡ್ಕರ್ ತೀರಿಕೊಂಡ ದಿನವೂ ಹೌದು.**

**ಇಡೀ ಜಗತ್ತು ಗೌರವಿಸುವ ಮಹಾತ್ಮ ನೆಲ್ಸನ್ ಮಂಡೇಲಾ ಅವರು 27ವರ್ಷಗಳ ಜೈಲು ವಾಸ ಅನುಭವಿಸಿ ಹೊರಬಂದಿದ್ದರೂ ಅಮೆರಿಕಾದ ಭಯೋತ್ಪಾದಕರ ಪಟ್ಟಿಯಲ್ಲಿ ಇದ್ದಿದ್ದರು ಎಂಬುದು ನಾಚಿಕೆಗೇಡಿನ ಸಂಗತಿ.**

**ಮನುಷ್ಯನ ಮನದೊಳಗೆ ಅಡಗಿ ಕೂತಿದ್ದ ವರ್ಣಭೇದದ ಕ್ರೌರ್ಯವನ್ನು ಕಿತ್ತೆಸೆಯಲು ತನ್ನ ಜೀವನವನ್ನೇ ಮುಡಿಪಾಗಿಟ್ಟ ಪ್ರೀತಿಯ "ಮಡಿಬಾ"ನಿಗೆ ನಾವು ಮಕ್ಕಳೆಲ್ಲ ಸೇರಿ ಗೌರವದಿಂದ ನಮಿಸುತ್ತೇವೆ.**

*************************************************

**ನಾಳೆಗಳು ನಮ್ಮದು.....**

'ಮಕ್ಕಳ ಮನಸ್ಸು ಮತ್ತು ಪರಿಸರವನ್ನು ಹಾಳು ಮಾಡಬಾರದು' ಎಂಬ ನಾ. ಡಿಸೋಜರ ಮಾತು ದೊಡ್ಡವರೆ ನಿಮಗಾಗಿ. ನಿಮ್ಮ ನಾಳೆಗಳು ನಮ್ಮ ಇಂದು. ಆದರೆ, ನಮ್ಮ ನಾಳೆಗಳು ನಿಜವಾಗಿಯೂ ನಾಳೆಗಳು ಅದನ್ನು ಉಳಿಸಿಕೊಡಲು ಇಂದೇ ಮುಂದಾಗೋಣ....

**ವಿಳಾಸ : ಸಂಪಾದಕರು, ಅಳ್ಳೀಮರ**
**ಸರ್ಕಾರಿ ಪ್ರೌಢ ಶಾಲೆ, ಹೆಗ್ಗಡಹಳ್ಳಿ**
**ನಂಜನಗೂಡು ತಾ. ಮೈಸೂರು ಜಿ. 571314**
**Email : sguddiyangadi@gmail.com**
**www.allimara.blogspot.com**
**ಸಂಚಾರಿ ದೂ. ವಾಣಿ : 9449331551**